ಶಿಲ್ಪಘಟ್ಟದ ಕೆಲವು ವರ್ತಕರು ಪ್ರತಿ ತಿಂಗಳೂ ಹಣ ಸಂಗ್ರಹಿಸುತ್ತಾ ಎರಡು ಅಥವಾ ಮೂರು ವರ್ಷಗಳಿಗೊಮ್ಮೆ ವಿದೇಶ ಪ್ರವಾಸ ಮಾಡುವ ರೂಢಿಯಿರಿಸಿಕೊಂಡಿದ್ದಾರೆ. ಈ ರೀತಿ ಪ್ರವಾಸ ಹೋಗಿ ಬಂದ ವರ್ತಕರೊಬ್ಬರು ತಮ್ಮದೇ ಪ್ರವಾಸಿ ಸಂಸ್ಥೆಯೊಂದನ್ನು ತೆರೆದು, ತಿಂಗಳ ಕಂತುಗಳಲ್ಲಿ ಹಣ ಸಂಗ್ರಹಿಸಿ ಥಾಯ್ಲೆಂಡ್ ದೇಶಕ್ಕೆ ನೂರಾರು ಮಂದಿಯನ್ನು ಕರೆದುಕೊಂಡು ಹೋಗಿ ಬಂದಿದ್ದಾರೆ.

'ಪ್ರವಾಸದ ಬಗ್ಗೆ ಈಗ ಆಸಕ್ತಿ ಹೆಚ್ಚಿದೆ. ವಿದೇಶಕ್ಕೆ ಹೋಗುವ ಹಂಬಲವಿದ್ದರೂ ಹಣ ಹಾಗೂ ಸಮಯ ಎರಡನ್ನೂ ಹೊಂದಿಸಿಕೊಳ್ಳಲು ಬಹು ಮಂದಿ ಕಷ್ಟಪಡುತ್ತಾರೆ. ತಿಂಗಳ ಕಂತಿನಲ್ಲಿ ಹಣ ಕಟ್ಟಿಸಿಕೊಂಡಾಗ ಅದು ಹೊರೆಯಾಗುವುದಿಲ್ಲ. ನಾವು ಕಡಿಮೆ ಅವಧಿಯ ಉತ್ತಮ ರೀತಿಯ ಪ್ರವಾಸವನ್ನು ಆಯೋಜಿಸಿದರೆ ತಾಲ್ಲೂಕು ಕೇಂದ್ರಗಳಿಂದಲೂ ಅನೇಕರು ವಿದೇಶ ನೋಡಿಬರಬಹುದು' ಎಂದು ಭೂತಾನ್ ದೇಶಕ್ಕೆ ಪ್ರವಾಸ ಏರ್ಪಡಿಸುವ ಶಿಲ್ಪಘಟ್ಟದ ನಿವಾಸಿ ಗೃಹಿಣಿ ಸೌಮ್ಯ ಹೇಳುತ್ತಾರೆ.

'ವಿದೇಶ ಪ್ರವಾಸಕ್ಕೆ ಕೆಲವು ಬ್ಯಾಂಕ್‌ಗಳು ಸಾಲ ನೀಡುತ್ತವೆ. ಆದರೆ ಅದನ್ನು ಸಾಮಾನ್ಯರು ಪಡೆಯುವುದು ಕಷ್ಟಕರ. ಥಾಮಸ್ ಕುಕ್‌ನಂತಹ ದೊಡ್ಡ ಪ್ರವಾಸಿ ಸಂಸ್ಥೆಗಳು ಈಗ ಪ್ರವಾಸಕ್ಕೆ ಕಂತುಗಳ ಮೂಲಕ ಹಣ ಪಡೆಯುವ ವ್ಯವಸ್ಥೆಯನ್ನು ರೂಪಿಸಿವೆ. ಆದರೆ ಅವರ ಪ್ರವಾಸದ ವೆಚ್ಚ ಅಧಿಕವಿರುತ್ತದೆ. ನಾವುಗಳೇ ಒಗ್ಗೂಡಿ ಯೋಜನೆಯನ್ನು ರೂಪಿಸಿದರೆ, ಸಂಖ್ಯೆಗನುಗುಣವಾಗಿ ವೆಚ್ಚವನ್ನು ಕಡಿಮೆ ಮಾಡಬಹುದು' ಎನ್ನುತ್ತಾರೆ ಅವರು.

## ಸ್ವತಂತ್ರ ಪ್ರಯಾಣ

ನಮ್ಮ ಕೈಯಲ್ಲಿನ ಮೊಬೈಲ್ ಬಳಸಿಯೇ ನಾವು ಈಗ ಸಾಕಷ್ಟು ಮಾಹಿತಿ ಸಂಗ್ರಹಿಸಬಹುದು. ಕೆಲವು ದೇಶಗಳಿಗೆ ಕೆಲವು ಸಮಯದಲ್ಲಿ ವಿಮಾನ ದರ ಕಡಿಮೆ ಇರುತ್ತದೆ. ಅದನ್ನು ಗಮನಿಸುತ್ತಾ ಆ ಸಮಯದಲ್ಲಿ ಟಿಕೆಟ್ ಬುಕ್ ಮಾಡಬಹುದು. ಭಾರತೀಯರಿಗೆ ಕೆಲವು ದೇಶಗಳು ಅಲ್ಲಿಗೆ ಹೋದ ಮೇಲೆ ವೀಸಾ ಪಡೆಯುವ ಅನುಕೂಲ ಮಾಡಿಕೊಟ್ಟಿವೆ. ಆ ಸವಲತ್ತನ್ನೂ ಬಳಸಿಕೊಳ್ಳಬಹುದು. ರಾತ್ರಿ ಉಳಿಯಲು ಐಷಾರಾಮಿ ಹೋಟೆಲ್ ಬೇಕಿಲ್ಲದಿದ್ದರೆ, ಕಡಿಮೆ ಖರ್ಚಿನಲ್ಲಿ ಹೋಟೆಲ್ ಅಥವಾ ಮನೆಗಳಲ್ಲಿ ಪೇಯಿಂಗ್ ಗೆಸ್ಟ್ ರೀತಿ ಉಳಿದುಕೊಂಡು ಆಯಾ ದೇಶ ಸುತ್ತಿ ಬರಬಹುದು.

'ಇಂಡೋನೇಷಿಯಾದ ಬಾಲಿ ನೋಡಲು ನಾನು ವಿಮಾನದ ದರ ಕಡಿಮೆ ಇದ್ದಾಗ ಬುಕ್ ಮಾಡಿದೆ. ಅಲ್ಲಿಗೆ ಹೋಗಿ ವೀಸಾ ಪಡೆದೆ. 'ಏರ್ ಬಿಎನ್‌ಬಿ' (airbnb.co.in) ಎಂಬ ವೆಬ್‌ಸೈಟ್ ಇದೆ. ಅದರಲ್ಲಿ ನೋಂದಣಿ ಮಾಡಿಕೊಂಡರೆ, ನಾವು ಹೋಗುವ ದೇಶದಲ್ಲಿ ಮನೆಗಳಲ್ಲಿ ಉಳಿದುಕೊಳ್ಳಲು ಅನುಕೂಲ ಮಾಡಿರುವವರ ವಿಳಾಸ–ದರಪಟ್ಟಿ ಸಿಗುತ್ತದೆ. ಅದರಲ್ಲಿ ಉಳಿಯಲು ಸ್ಥಳವನ್ನು ಬುಕ್ ಮಾಡಿದೆ. ಅಲ್ಲಿ ಏನೇನೆಲ್ಲ ನೋಡಬೇಕೆಂದು ಮೊದಲೇ ಅಧ್ಯಯನ ಮಾಡಿ ನಿರ್ಧರಿಸಿದ್ದೆ. ಅತ್ಯಂತ ಕಡಿಮೆ ದರದಲ್ಲಿ ಬಾಲಿ ನೋಡಿ ಬಂದೆ. ಪ್ಯಾಕೇಜ್ ಟ್ರಿಪ್‌ನಲ್ಲಿ ತೋರಿಸದ ಅಗ್ನಿಪರ್ವತದ ಚಾರಣ ಮಾಡಿದೆ ಮತ್ತು ಸ್ಥಳೀಯ ಖಾದ್ಯಗಳ ರುಚಿ ನೋಡಿದೆ' ಎಂದು ಒಬ್ಬರೇ ಪ್ರಯಾಣ ಮಾಡಿದ ಅನುಭವವನ್ನು ರಮೇಶ್ ಬಾಬು ಹಂಚಿಕೊಂಡರು.

## ಟೀ ಮಾರುವ ದಂಪತಿಯ ವಿದೇಶ ಪ್ರವಾಸ

ಕೇರಳದ ಕೊಚ್ಚಿಯಲ್ಲಿ ಟೀ ಅಂಗಡಿ ಇಟ್ಟುಕೊಂಡಿರುವ ವಿಜಯನ್ (67) ಮತ್ತು ಮೋಹನ (65) ದಂಪತಿ ಪ್ರವಾಸಿಪ್ರಿಯರು. ಬರುವ ಅತ್ಯಲ್ಪ ಆದಾಯವನ್ನೇ ಪ್ರವಾಸಕ್ಕಾಗಿ ಕೂಡಿಡುತ್ತಾರೆ. ಬ್ಯಾಂಕ್‌ನಲ್ಲಿ ಸಾಲ ಪಡೆದು ವಿದೇಶ ಪ್ರವಾಸ ಮಾಡಿಬರುತ್ತಾರೆ. ಟೀ ಮಾರುತ್ತಾ ಸಾಲ ತೀರಿಸುತ್ತಾರೆ. ಅಮೆರಿಕ, ಬ್ರಿಟನ್, ಫ್ರಾನ್ಸ್, ಆಸ್ಟ್ರಿಯಾ, ಈಜಿಪ್ಟ್, ಜೋರ್ಡಾನ್, ಮಲೇಶಿಯಾ, ಸಿಂಗಪೂರ ಸೇರಿದಂತೆ ಅವರು ನೋಡಿರುವ ದೇಶಗಳ ಸಂಖ್ಯೆ 18. ಅವರ ಪ್ರವಾಸ ಪ್ರಿಯತೆಯನ್ನು ಮೆಚ್ಚಿ ಕಳೆದ ವರ್ಷ ದುಬೈನ ಪ್ರವಾಸಿ ಸಂಸ್ಥೆ 'ಅರೂಹ ಟೂರ್ಸ್' ತನ್ನ ಖರ್ಚಿನಲ್ಲೇ ದುಬೈಗೆ ಕರೆಸಿಕೊಂಡು ಉಚಿತವಾಗಿ ಪ್ರವಾಸ ಮಾಡಿಸಿ ಕಳುಹಿಸಿಕೊಟ್ಟಿತು. ವಿದೇಶ ಪ್ರವಾಸ ಕೇವಲ ಉಳ್ಳವರ ಕನಸಲ್ಲ. ಮನಸ್ಸು ಮಾಡಿದರೆ, ಕನಸು ಕಂಡರೆ ಸಾಮಾನ್ಯರೂ ವಿದೇಶ ಪ್ರವಾಸ ಕೈಗೊಳ್ಳಬಹುದು ಎಂಬುದನ್ನು ಈ ದಂಪತಿ ಸಾಧಿಸಿ ತೋರಿಸಿದ್ದಾರೆ..

